ಕರ್ನಾಟಕ ವಿಧಾನ ಸಭೆ, ಸಂಶೋಧನಾ ಮತ್ತು ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
ಇಲಾಖೆ / ವಿಷಯ : DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER:
ದಿನಾಂಕ : DATE :

ಲೋಕೋಪಯೋಗಿ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿಗೆ ಸೂಚನೆ | **ನವೆಂಬರ್ 30ರೊಳಗೆ ಬಾಕಿ ವಸೂಲಿಗೂ ಸಲಹೆ**


# ಡಿ.2ರ ಬಳಿಕ ಟರ್ಫ್ ಕ್ಲಬ್ ಸ್ಥಗಿತಕ್ಕೆ ಸೂಚನೆ

**ಬೆಂಗಳೂರು:** ಡಿಸೆಂಬರ 2ರ ನಂತರ ನಗರದ ಹೃದಯ ಭಾಗದಲ್ಲಿರುವ ಟರ್ಫ್ ಕ್ಲಬ್‌ನ ಚಟುವಟಿಕೆಗಳನ್ನು ಸ್ಥಗಿತಗೊಳಿಸಲು ಕ್ರಮ ಕೈಗೊಳ್ಳುವಂತೆ ಸಾರ್ವಜನಿಕ ಲೆಕ್ಕಪತ್ರ ಸಮಿತಿ ಲೋಕೋಪಯೋಗಿ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿಗೆ ಸೂಚನೆ ನೀಡಿದೆ ಎಂದು ಸಮಿತಿ ಅಧ್ಯಕ್ಷ ಎಚ್.ಕೆ. ಪಾಟೀಲ್ ಹೇಳಿದ್ದಾರೆ.

ಮಂಗಳವಾರ ಸಮಿತಿ ಸಭೆಯ ನಂತರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು. ಟರ್ಫ್ ಕ್ಲಬ್ ಗುತ್ತಿಗೆ ಅವಧಿಯು 2009 ರಲ್ಲಿಯೇ ಮುಕ್ತಾಯವಾಗಿದ್ದು, ಇದುವರೆಗೂ ಬಾಡಿಗೆ ಕಟ್ಟದಿರುವುದರಿಂದ 32.86 ಕೋಟಿ ರೂ. ಬಾಕಿ ಉಳಿಸಿಕೊಂಡಿದ್ದು, ನ. 30ರೊಳಗೆ ಬಾಕಿ ಹಣವನ್ನು ವಸೂಲಿ ಮಾಡುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ಹೇಳಿದರು.

**1983ರಲ್ಲಿ ಒಪ್ಪಂದ:** ಮೈಸೂರು ಮಹಾರಾಜರು ಕುದುರೆ ಓಡಿಸುವ ಸ್ಪರ್ಧೆಗಾಗಿ 1923ರಲ್ಲಿ 83.14 ಎಕರೆ ಜಮೀನು ಬಾಡಿಗೆ ಆಧಾರದ ಮೇಲೆ ನೀಡಿದ್ದರು. 1983ರಲ್ಲಿ ಬೆಂಗಳೂರು ಟರ್ಫ್ ಕ್ಲಬ್ ಮತ್ತು ರಾಜ್ಯ ಸರ್ಕಾರದ ನಡುವೆ ಒಪ್ಪಂದ. 1981 ಜ. 1ರಿಂದ ಜಾರಿಗೆ ಬರುವಂತೆ 30 ವರ್ಷದ ಗುತ್ತಿಗೆ ಅವಧಿ, ವಾರ್ಷಿಕ 5 ಲಕ್ಷ ರೂ. ಬಾಡಿಗೆ ನೀಡಲು ಒಪ್ಪಂದವಾಗಿದೆ. ಈ ಒಪ್ಪಂದದಂತೆ ರಾಜ್ಯ ಸರ್ಕಾರ ಈ ಒಪ್ಪಂದವನ್ನು ಕಾಲ ಕಾಲಕ್ಕೆ ತಿದ್ದುಪಡಿ ಮಾಡುವ ಹಾಗೂ ಅದನ್ನು ವಾಪಸ್ ಪಡೆದುಕೊಳ್ಳುವ ಅಧಿಕಾರ ಹೊಂದಿದೆ. ಅದರಂತೆ 1989ರ ಡಿ. 31ಕ್ಕೆ ಟರ್ಫ್ ಕ್ಲಬ್ ಜತೆಗಿನ ಒಪ್ಪಂದ ಮುಕ್ತಾಯವಾಗಿದ್ದು, ಅದರಂತೆ ಸರ್ಕಾರದ ಜಮೀನನ್ನು ಸರ್ಕಾರದ ವಶಕ್ಕೆ ಪಡೆದುಕೊಳ್ಳಲು ಆದೇಶ ನೀಡಿದರೂ ಟರ್ಫ್ ಕ್ಲಬ್ ಜಮೀನು ವಾಪಸ್ ನೀಡಿಲ್ಲ.

ಸಾಂದರ್ಭಿಕ ಚಿತ್ರ



## ಪಾರ್ಕ್‌ಗೆ ಸೂಚನೆ

**ಟರ್ಫ್ ಕ್ಲಬ್ ಸ್ಥಳಾಂತರಗೊಂಡ ನಂತರ ಅದೇ ಸ್ಥಳದಲ್ಲಿ ದೆಹಲಿಯ ಪಾಲಿಕಾ ಬಜಾರ್ ಮಾದರಿಯಲ್ಲಿ ತಳ ಮಹಡಿಯಲ್ಲಿ ಮಾರುಕಟ್ಟೆಯ ಮೇಲೆ ಉದ್ಯಾನವನ ಮಾಡುವಂತೆ ಸರ್ಕಾರಕ್ಕೆ ಶಿಫಾರಸು ಮಾಡಿರುವುದಾಗಿ ಪಾಟೀಲ್ ಹೇಳಿದರು.**

**ಕ್ಲಬ್ ಸ್ಥಳಾಂತರಕ್ಕೆ ಘೋಷಣೆ:** ಸಿಎಜಿ ವರದಿಯಲ್ಲಿಯೂ ಪ್ರಸ್ತಾಪವಾಗಿದ್ದು, ಟರ್ಫ್ ಕ್ಲಬ್ ಸರಿಯಾದ ಪ್ರಮಾಣದಲ್ಲಿ ಬಾಡಿಗೆ ಪಾವತಿಸದ ಹಿನ್ನೆಲೆಯಲ್ಲಿ ಸರ್ಕಾರಕ್ಕೆ 71 ಕೋಟಿ 87 ಲಕ್ಷ ರೂ. ನಷ್ಟವಾಗಿದೆ ಎಂದು ವರದಿ ನೀಡಿದೆ. 2005ರಲ್ಲಿ ಆಗಿನ ಸಾರ್ವಜನಿಕ ಲೆಕ್ಕಪತ್ರ ಸಮಿತಿಯಲ್ಲಿಯೂ ಈ ಬಗ್ಗೆ ಚರ್ಚಿಸಿ ಪ್ರಧಾನ ಮಂಡಲಕ್ಕೆ ವರದಿ ಸಲ್ಲಿಸಲಾಗಿದೆ. ರಾಮಕೃಷ್ಣ ಹೆಗಡೆ ಅವರು ಹಣಕಾಸು ಸಚಿವರಾಗಿದ್ದ ಹಾಗೂ ಎಸ್.ಎಂ. ಕೃಷ್ಣ ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಟರ್ಫ್ ಕ್ಲಬ್ಬನ್ನು ಸ್ಥಳಾಂತರಿಸಲು ಬಜೆಟ್‌ನಲ್ಲಿ ಘೋಷಣೆ ಮಾಡಲಾಗಿತ್ತು.

2000ನೇ ಇಸ್ವಿಯಿಂದ ಪ್ರತಿ ವರ್ಷ ವಾರ್ಷಿಕ 10 ಲಕ್ಷ ರೂ. ಬಾಡಿಗೆ ನಿಗದಿ ಪಡಿಸಿ ಪ್ರತಿ ವರ್ಷ ಶೇ. 10 ಹೆಚ್ಚಳ ಮಾಡುವಂತೆ ಅಂದಿನ ಪಿಎಸಿ ಶಿಫಾರಸು ಮಾಡಿತ್ತು. ಆದರೆ, ಅಧಿಕಾರಿಗಳ ನಿರ್ಲಕ್ಷ್ಯದಿಂದ ಯಾವುದೇ ಸೂಚನೆಗಳು ಪಾಲನೆಯಾಗಿಲ್ಲ. 2009ರಲ್ಲಿ ಗುತ್ತಿಗೆ ಅವಧಿ ಮುಗಿದ ತಕ್ಷಣ ಟರ್ಫ್ ಕ್ಲಬ್ ತೆರವುಗೊಳಿಸುವಂತೆ ಅಧಿಕಾರಿಗಳು ನೋಟಿಸ್ ನೀಡಿದ್ದು, ಅದಕ್ಕೆ ಟರ್ಫ್ ಕ್ಲಬ್‌ನವರು ಸುಪ್ರೀಂ ಕೋರ್ಟ್‌ನಿಂದ ಯಥಾಸ್ಥಿತಿ ಕಾಯ್ದುಕೊಳ್ಳುವಂತೆ ತಡೆಯಾಜ್ಞೆ ತಂದಿದ್ದಾರೆ. ಅಧಿಕಾರಿಗಳು ತಡೆಯಾಜ್ಞೆಯನ್ನು ತೆರವುಗೊಳಿಸದೇ ಇರುವುದರಿಂದ ಟರ್ಫ್ ಕ್ಲಬ್‌ನವರು ಯಾವುದೇ ಬಾಡಿಗೆ ಪಾವತಿಸಿಲ್ಲ. ಹೀಗಾಗಿ ಡಿ. 2 ರೊಳಗೆ ಸುಪ್ರೀಂ ಕೋರ್ಟ್‌ನಲ್ಲಿನ ತಡೆಯಾಜ್ಞೆಯನ್ನು ತೆರವುಗೊಳಿಸಲು ಅಗತ್ಯ ಕ್ರಮ ಕೈಗೊಂಡು, ಸಮಿತಿಗೆ ವರದಿ ಸಲ್ಲಿಸುವಂತೆ ಕಾನೂನು ಇಲಾಖೆ ಪ್ರಧಾನ ಕಾರ್ಯದರ್ಶಿಗೆ ಸೂಚನೆ ನೀಡಲಾಗಿದೆ ಎಂದು ಪಾಟೀಲ್ ಹೇಳಿದರು.